ವಿಜ್ಞಾನ ಪ್ರಯೋಗಾಲಯ

ಶ್ವಾಸಕೋಶ ಸಾಮರ್ಥ್ಯ

- ಇದುವರೆಗೆ ಬಳಸಿರದ ಹೊಸ ಕಸದ ಚೀಲವೊಂದನ್ನು ನಿಮ್ಮ ಬಾಯಿಯ ಹತ್ತಿರವಿರಿಸಿಕೊಂಡು (ಎ), ಸಾಧ್ಯವಿದ್ದಷ್ಟು ಬಲಪ್ರಯೋಗಿಸಿ ಒಮ್ಮೆ ಅದರೊಳಗೆ ಊದಿ. ಚೀಲದೊಳಗೆ ಎಷ್ಟು ಗಾಳಿ ಊದಲು ಸಾಧ್ಯವಾಯಿತೆಂದು ಅವಲೋಕಿಸಿ.
- ಈಗ ಚೀಲದ ಬಾಯಿಯನ್ನು ಸಂಪೂರ್ಣ ಅಗಲವಾಗಿ ತೆರೆದಿಟ್ಟು, ನಿಮ್ಮ ಬಾಯಿಯಿಂದ ತುಸು ದೂರದಲ್ಲಿ ಹಿಡಿದುಕೊಳ್ಳಿ (ಬಿ). ಅದರೊಳಗೆ ಮತ್ತೊಮ್ಮೆ ಪೂರ್ಣ ಬಲ ಪ್ರಯೋಗಿಸಿ ಗಾಳಿ ಊದಿರಿ. ಎರಡರಲ್ಲಿ, ಯಾವುದು ಹೆಚ್ಚು ತುಂಬಿರುವಂತೆ ಕಾಣುತ್ತದೆ?

1. (ಎ) ಯಲ್ಲಿರುವ ಚೀಲ
2. (ಬಿ) ಯಲ್ಲಿರುವ ಚೀಲ
3. ಎರಡೂ ಚೀಲಗಳು ಸಮನಾಗಿ ತುಂಬಿರುವಂತೆ ಕಾಣುತ್ತದೆ.

ಕೊಡುಗೆ: ಜಿ ಎಸ್. ರೌಟೇಲಾ, ಇವರು ಮುಂಬಯಿಯ ರಾಷ್ಟ್ರೀಯ ವಿಜ್ಞಾನ ಸಂಗ್ರಹಾಲಯ ಪರಿಷತ್ತಿನ ಮಾಜಿ ಮಹಾನಿರ್ದೇಶಕರು, ನೆಹರು ವಿಜ್ಞಾನ ಕೇಂದ್ರದ ನಿರ್ದೇಶಕರು, ಕೊಲ್ಕೊತಾದ ವಿಜ್ಞಾನ ನಗರಿಯ ನಿರ್ದೇಶಕರು ಮತ್ತು ಆಂತ್ರಪಾಲಜಿಕಲ್ ಸರ್ವೇ ಆಫ್ ಇಂಡಿಯಾದ ನಿರ್ದೇಶಕರು (ಪ್ರಭಾರಿ) ಆಗಿದ್ದಾರೆ. ಅವರನ್ನು gsr.rautela@gmail.com ಮೂಲಕ ಸಂಪರ್ಕಿಸಬಹುದು.

ಅನುವಾದ: **ಸ್ಮಿತಾ ಭಟ್** ಪರಿಶೀಲನೆ: **ಬಿ.ಎಂ.ಚಂದ್ರಶೇಖರ್**